ಓ.ಎಸ್. ನಂಬರಃ 122/2021

ಪಿ. ಡಬ್ಲ್ಯೂಃ 1

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 20-06-2025)

ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,

ನಾನು ಕುಟುಂಬನಾತೆಯಿಂದ ದಾವಾ ಆಸ್ತಿಯಲ್ಲಿ ಪಾಲು ಕೇಳುತ್ತಿದ್ದೇನೆ. ದಾಖಲಾತಿಗಳ ಆಧಾರದಲ್ಲಿ ಅಲ್ಲ. ದಾವಾ ಆಸ್ತಿಗಳು ಕುಟುಂಬದ ಆಸ್ತಿ ಎಂದು ಸರ್ವೆ ನಂ. 463/4ಬ ರಲ್ಲಿರುವ ಮ್ಯುಟೇಶನ್ ಎಂಟ್ರಿಯ ಆಧಾರದಲ್ಲಿ ಹೇಳುತ್ತಿದ್ದೇನೆ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿ ಇರುವುದಿಲ್ಲ. ನಿಪಿ-12 ವೀಲುನಾಮೆಯ ಬಗ್ಗೆ ಈ ದಾವೆ ದಾಖಲು ಮಾಡುವಾಗ ತಿಳಿದು ಬಂದಿರುತ್ತದೆ. ಸದ್ರಿ ವೀಲುನಾಮೆ ಆದಾಗ ನಾನು ಜನಿಸಿರಲಿಲ್ಲ, ಹಾಗಾಗಿ ನನಗೆ ಆ ಬಗ್ಗೆ ಗೊತ್ತಿರಲಿಲ್ಲ. ಸದ್ರಿ ವೀಲುನಾಮೆಯನ್ನು ಯಾರು ಬರೆದರು ಎಂದು ವೈಯಕ್ತಿಕವಾದ ಮಾಹಿತಿ ಇಲ್ಲ. ಆದರೆ ನಿಪಿ-12 ವೀಲುನಾಮೆ ನೋಡಿರುತ್ತೇನೆ. ನಿಪಿ-12 ರ ಮೂಲ ವೀಲುನಾಮೆ ನನ್ನ ಬಳಿ ಇರುತ್ತದೆ. ಅದನ್ನು ನನ್ನ ವಕೀಲರಿಗೆ ತೋರಿಸಿರುತ್ತೇನೆ. ಅದನ್ನು ಹಾಜರುಪಡಿಸಲು ನನಗೇನು ತೊಂದರೆ ಇರುವುದಿಲ್ಲ. ನಿಪಿ-12 ಮೂಲ ವೀಲುನಾಮೆಯಾಗಿರುವುದಿಲ್ಲ. ಸದ್ರಿ ವೀಲುನಾಮೆಗೆ ಯಾರು ಸಹಿ ಹಾಕಿರುತ್ತಾರೆ ಮತ್ತು ಯಾರು ಬರಹಗಾರರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸದ್ರಿ ವೀಲುನಾಮೆಯನ್ನು ಓದಿರುತ್ತೇನೆ. ವೀಲುನಾಮೆಯನ್ನು ಶ್ರೀಮತಿ ಹಾದಿ ಮಾರಿ ನಾಯ್ಕು ಎಂಬುವವರು ಬರೆದಿರುತ್ತಾರೆ. ನಿಪಿ-12 ವೀಲುನಾಮೆಗೆ ಶ್ರೀಮತಿ ಹಾದಿ ಮಾರಿ ನಾಯ್ಕು ರವರು ಸಹಿ ಅಥವಾ ಹೆಬ್ಬೆಟ್ಟು ಹಾಕಿದ್ದಾರಾ ಎಂದರೆ, ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದ್ರಿ ವೀಲುನಾಮೆಯ ಪ್ರಕಾರ ನಾನು ಹಕ್ಕು ಕೇಳುತ್ತಿಲ್ಲ.

2. ಶ್ರೀಮತಿ ಹಾದಿ ಮಾರಿ ನಾಯ್ಕು ರವರು ನಮ್ಮ ಕುಟುಂಬವನ್ನು ನೋಡಿಕೊಳ್ಳುತ್ತಿರಲಿಲ್ಲ. ಹಾಗೆ ಆಕೆಯು ನಮ್ಮ ಕುಟುಂಬದ ಯಜಮಾನತಿ ಆಗಿರಲಿಲ್ಲ. ಶ್ರೀಮತಿ ಹಾದಿ ಮಾರಿ ನಾಯ್ಕು ರವರ ಮಕ್ಕಳು ನಮ್ಮ ಕುಟುಂಬದಿಂದ ಪ್ರತ್ಯೇಕವಾಗಿ ವಾಸ ಮಾಡಿಕೊಂಡಿರುತ್ತಾರೆ. ಶ್ರೀಮತಿ ಹಾದಿ ಮಾರಿ ನಾಯ್ಕು ರವರಿಗೆ ಜಟ್ಟಮ್ಮ ಮತ್ತು ಮಾದೇವಿ ಎಂಬ ಹೆಸರಿನ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರಲ್ಲಿ ಮಾದೇವಿ ಅವಿವಾಹಿತಳಾಗಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಹಾಗಾಗಿ ಸದ್ರಿ ಮಾದೇವಿ ಯವರ ವಾರಸುದಾರರು ಜಟ್ಟಮ್ಮ ಮಾತ್ರ ಎಂದರೆ ಸರಿ. ಜಟ್ಟಮ್ಮ ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದ್ರಿ ಜಟ್ಟಮ್ಮನವರ ವಾರಸುದಾರರು ಪ್ರತಿವಾದಿ 3(ಎ) ದಿಂದ 3(ಸಿ) ಆಗಿರುತ್ತಾರೆ ಎಂದರೆ ಸರಿ.

3. ಶ್ರೀಮತಿ ಹಾದಿ ಮಾರಿ ನಾಯ್ಕು ರವರ ಮರಣದ ನಂತರ ದಾವಾ ಆಸ್ತಿಗಳ ಕಂದಾಯ ದಾಖಲಾತಿಗಳು ಪ್ರತಿವಾದಿ 3(ಎ) ದಿಂದ 3(ಸಿ) ರವರ ಹೆಸರಿಗೆ ದಾಖಲಾಗಿರುತ್ತವೆ ಎಂದರೆ ಸರಿ. ಸದ್ರಿ ಕಂದಾಯ ದಾಖಲಾತಿಗಳನ್ನು ಇವತ್ತಿನವರೆಗೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ, ಸಾಕ್ಷಿಯು ಹೌದು ಆ ಬಗ್ಗೆ ನಮಗೆ ಗೊತ್ತಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಶ್ರೀಮತಿ ಹಾದಿ ಮಾರಿ ನಾಯ್ಕು ರವರಿಗೆ ಗಂಡು ಮಕ್ಕಳು ಇಲ್ಲದೇ ಇದ್ದ ಕಾರಣ ಅವರ ಮಗಳಾದ ಜಟ್ಟಮ್ಮನವರ ಗಂಡನಾದ ಶನಿಯಾರ ತಂದೆ ಮಾಸ್ತಿ ನಾಯ್ಕು ರವರನ್ನು ಮನೆ ಅಳಿಯನಾಗಿ ಮಾಡಿಕೊಂಡಿದ್ದರು ಎಂದರೆ ಸರಿ. ಶ್ರೀಮತಿ ಹಾದಿ ಮಾರಿ ನಾಯ್ಕು ರವರು

ಮರಣ ಹೊಂದುವವರೆಗೆ ಅವರ ಯೋಗಕ್ಷೇಮವನ್ನು ಅವರ ಮಗಳ ಗಂಡನಾದ ಶನಿಯಾರ ತಂದೆ ಮಾಸ್ತಿ ನಾಯ್ಕ ರವರು ನೋಡಿಕೊಳ್ಳುತ್ತಿದ್ದರು ಎಂದರೆ ಆ ಬಗ್ಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿರುತ್ತಾರೆ. ಹಾಗಾಗಿ ದಿನಾಂಕಃ 26-08-1977 ರಲ್ಲಿ ಶ್ರೀಮತಿ ಹಾದಿ ಮಾರಿ ನಾಯ್ಕ ರವರು ಶನಿಯಾರ ತಂದೆ ಮಾಸ್ತಿ ನಾಯ್ಕ ರವರ ಹೆಸರಿಗೆ ನೊಂದಾಯಿತ ವೀಲುನಾಮೆ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನಮಗೆ ಗೊತ್ತಿರಲಿಲ್ಲ. ಸದ್ರಿ ವೀಲುನಾಮೆಯನ್ನು ಕುಮಟಾದ ಉಪ ನೊಂದಣಾಧಿಕಾರಿಯವರ ಕಛೇರಿಯಲ್ಲಿ ದಿನಾಂಕಃ 31-08-1977 ರಂದು ನೊಂದಾವಣೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಶ್ರೀಮತಿ ಹಾದಿ ಮಾರಿ ನಾಯ್ಕ ರವರ ಮರಣಾನಂತರ ವೀಲುನಾಮೆಯ ಪ್ರಕಾರ ಶನಿಯಾರ ತಂದೆ ಮಾಸ್ತಿ ನಾಯ್ಕ ರವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿ 3(ಎ) ದಿಂದ 3(ಸಿ) ರವರು ಸದ್ರಿ ಶನಿಯಾರ ತಂದೆ ಮಾಸ್ತಿ ನಾಯ್ಕ ರವರ ವಾರಸುದಾರರು ಎಂದರೆ ಸರಿ.

4. ದಾವಾ ಆಸ್ತಿಗಳು ಶ್ರೀಮತಿ ಹಾದಿ ಮಾರಿ ನಾಯ್ಕ ರವರ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನನ್ನ ಅಜ್ಜ ಗೋಯ್ದು ಅಲಿಯಾಸ್ ಗೋವಿಂದ ನಾಯ್ಕ ರವರಿಗೂ ಮತ್ತು ನನ್ನ ತಂದೆಗೂ ಯಾವುದೇ ಸಂಬಂಧ ಮತ್ತು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿಯೇ ನನ್ನ ಅಜ್ಜ ಮತ್ತು ನನ್ನ ತಂದೆ ಅವರ ಜೀವಿತ ಕಾಲದಲ್ಲಿ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನನಗೂ ಸಹ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-12 ವೀಲುನಾಮೆ ಫೋರ್ಜರಿ ಮಾಡಿದ ವೀಲುನಾಮೆಯಾಗಿರುತ್ತದೆ ಎಂದರೆ ಸರಿಯಲ್ಲ. ಹಾಗಾಗಿಯೇ ಅದರ ಮೂಲ ಪ್ರತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ ಅಲ್ಲ. ನನ್ನ ಅಜ್ಜ ಗೋಯ್ದು ಅಲಿಯಾಸ್ ಗೋವಿಂದ ನಾಯ್ಕ ರವರಿಗೆ ಬೈಲೂರು ಗ್ರಾಮದ ಸರ್ವೆ ನಂ. 463/4, 535, 502/9, 593/2, 615 ರಲ್ಲಿ ಪ್ರತ್ಯೇಕ ಗೇಣಿ ಭೂಮಿಗಳು ಇದ್ದವು ಎಂದರೆ ಸರಿಯಲ್ಲ. ನನ್ನ ಅಜ್ಜ ಸದ್ರಿ ಭೂಮಿಗಳಿಗೆ ಸಂಬಂಧಿಸಿದಂತೆ ಮಂಜೂರಿಗಾಗಿ ಅರ್ಜಿ ಸಲ್ಲಿಸದೇ ಇದ್ದರಿಂದ ಸದ್ರಿ ಭೂಮಿ ಅದರ ಮಾಲಿಕರ ಪಾಲಾಯಿತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪ್ರತಿವಾದಿ 3(ಎ) ದಿಂದ 3(ಸಿ) ರವರ ನಡುವೆ ಪಾಲಾಗುವಂತಹ ಆಸ್ತಿಗಳು ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸುಳ್ಳು ದಾವೆ ತಂದು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**